# ಕರ್ನಾಟಕ ಸರ್ಕಾರ

ನಂ.ಗ್ರಾಅಪ 1045 ಗ್ರಾಪಂಅ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:16-09-2017

## ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯತಿ ಸಭೆ ಮತ್ತು ಗ್ರಾಮ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸುವ ಮತ್ತು ಸಭಾ ನಡವಳಿಗಳನ್ನು ವಿಡಿಯೋ ಚಿತ್ರೀಕರಣ ಮಾಡುವ ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ.

*******

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 52, 53 ಮತ್ತು 54 ರಲ್ಲಿ ಗ್ರಾಮ ಪಂಚಾಯತಿ ಸಭೆಯನ್ನು ಆಯೋಜಿಸುವ ಹಾಗೂ ನಡೆಸುವ ವಿಧಿವಿಧಾನಗಳನ್ನು ವಿವರಿಸಲಾಗಿದೆ. ಈ ಸಂಬಂಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಸಭೆಗಳ ಕಾರ್ಯವಿಧಾನ) ನಿಯಮಗಳು, 1994 ಮತ್ತು ಗ್ರಾಮ ಪಂಚಾಯತಿಗಳ ಸಭೆಯ ಕಾರ್ಯಕಲಾಪಗಳು ನಿಯಮಬದ್ಧವಾಗಿ, ಶಿಸ್ತು ಬದ್ಧವಾಗಿ ಹಾಗೂ ಪ್ರಶಾಂತವಾಗಿ ನಿರ್ವಹಿಸಲು ಅನುವಾಗುವಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಸಭೆಗಳಲ್ಲಿ ಅಡ್ಡ ಪ್ರಶ್ನೆಗಳು ಮತ್ತು ನಿರ್ಣಯಗಳು) ನಿಯಮಗಳು 1994 ನ್ನು ಜಾರಿಗೊಳಿಸಲಾಗಿದೆ.

ಮುಂದುವರೆದು, ಗ್ರಾಮ ಪಂಚಾಯತಿಯ ಸಭೆಗಳನ್ನು ಮತ್ತು ಗ್ರಾಮ ಸಭೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸುವ ದೃಷ್ಟಿಯಿಂದ ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಲಾಗಿದೆ.

1. ಗ್ರಾಮ ಪಂಚಾಯತಿ ಸಭೆಗಳ ಮತ್ತು ಗ್ರಾಮ ಸಭೆಗಳ ನಡವಳಿಗಳನ್ನು ಪ್ರಾರಂಭದಿಂದ ಮುಕ್ತಾಯವಾಗುವವರೆಗೆ ಕಡ್ಡಾಯವಾಗಿ ವೀಡಿಯೋ ಚಿತ್ರೀಕರಣ ಮಾಡಿಸುವುದು.
2. ಗ್ರಾಮ ಪಂಚಾಯತಿ ಸಭೆ ಮತ್ತು ಗ್ರಾಮ ಸಭೆ ನಡೆದ 24 ಗಂಟೆಯೊಳಗಾಗಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ನಡವಳಿಗಳನ್ನು ಸಿದ್ಧಪಡಿಸಿ ಅಧ್ಯಕ್ಷರ ಸಹಿ ಪಡೆದು ಪಂಚತಂತ್ರದಲ್ಲಿ ಅಳವಡಿಸಬೇಕು. ಒಂದು ಪಕ್ಷ ಅಧ್ಯಕ್ಷರು ಈ ಅವಧಿಯೊಳಗಾಗಿ ನಡವಳಿ ಅನುಮೋದಿಸಿ ಸಹಿ ಮಾಡದಿದ್ದರೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕರಡನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಬೇಕು.

-

3. ಗ್ರಾಮ ಪಂಚಾಯತಿ ಸಭೆ ಮತ್ತು ಗ್ರಾಮ ಸಭೆಗಳ ನಡವಳಿಯ ನಕಲು ಅಥವಾ ವೀಡಿಯೋ ಕ್ಲಿಪನ್ ಮಾಹಿತಿ ಹಕ್ಕು ಅಧಿನಿಯಮದಡಿ ಕೇಳುವವರಿಗೆ ನೀಡಬೇಕು.
4. ಮಾಹಿತಿ ಹಕ್ಕು ಅಧಿನಿಯಮದಡಿ ಪಡೆದ ನಕಲು/ ವೀಡಿಯೋ ಕ್ಲಿಪಿಂಗ್ ನ್ಯಾಯಾಲಯದ ಪ್ರಕರಣಗಳಲ್ಲಿ ಸಾಕ್ಷಿಯುತವಾದ ದಾಖಲೆಗಳೆಂದು ಪರಿಗಣಿಸತಕ್ಕದ್ದು.
5. ಗ್ರಾಮ ಪಂಚಾಯತಿಗಳು ಗ್ರಾಮ ಪಂಚಾಯತಿ ಸಭೆಗಳ ನಡವಳಿ ಮತ್ತು ಗ್ರಾಮ ಸಭೆಗಳ ನಡವಳಿ ವೀಡಿಯೋ ದಾಖಲೀಕರಣ ಹಾಗೂ ಇನ್ನಿತರ ಉದ್ದೇಶಕ್ಕೆ ತಮ್ಮ ಅನುದಾನದಲ್ಲಿ ಒಂದು ವೀಡಿಯೋ ಕಾಂ ಖರೀದಿಸುವುದು.

16/9/10

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು.
2) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
3) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

<u>ಪ್ರತಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಯವರಿಗೆ.
3) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
4) ಕಾರ್ಯಾಧ್ಯಕ್ಷರು, ಕರ್ನಾಟಕ ಪಂಚಾಯತ್ ಪರಿಷತ್, ನಂ.186/6, ಶಿರೂರು ಪಾರ್ಕ್ ರಸ್ತೆ, ನಟರಾಜ ಟಾಕೀಸ್ ಎದುರು, ಶೇಷಾದ್ರಿಪುರಂ, ಬೆಂಗಳೂರು–560020.
5) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.